ದಿವಾಳಿಯಾದ ಡಿಕ್ರೀ ದೇಣೇದಾರ ಮುಳಬಾಗಲ್ ಕಸಬಾದಲ್ಲಿರುವ ದರಗಾ ಮುಜಾವರ್ ಷಂಷುದ್ದೀ ವಿಷಯದಲ್ಲಿ—

ಸ್ರ್ 1889ನೇ ಇಸವಿ ದಿವಾಳಿ ಕೇಸ್ ನಂಬರ್ 758.

ಹುಕುಂ.

ಮೇಲ್ಕಂಡ ಮುಜಾವರ್ ಷಂಷುದ್ದೀನನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ಮೆ|| ಎಲ್. ಅನಂತಸ್ವಾಮಿಯಾರ ರೂಬರೂ ಅರ್ಜೀದಾರನಾದ ಷಂಷುದ್ದೀನನ ಪರವಾಗಿ ಪ್ಲೀಡರ್ ಕೇಪಗಿರಯ್ಯನವರನ್ನೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—ಯಾರುನ್ನೂ ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಷಂಷುದ್ದೀನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತಾಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ್ 1889ನೇ ಇಸವಿ ನವೆಂಬರ್ 1ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬೆಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದಸ್ತಖತ್ ಮಾಡಿದರು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಯಿದ್ದರೆ.	ಟಿಪ್ಪಣಿ.
1	ಮುಳಬಾಗಲ್ಲಿ ಇರತಕ್ಕ ಸೈದಹಾಜಿ ಮೈನರ್, ಗಾರ್ಡಿಯ್ಯ ನಂನ್ಮೊಬಿ ಹುರ್ಕೇಬಿ ..	97—1—5	1887	ಕೋಲಾರ ಮುನಸಿಳಿ ಕೋರ್ಟು 1887ನೇ ಇಸವಿ ಅರಜಿನಲ್ 645ನೇ ನಂಬರ್ ಡಿಕರೀ ಬಾಬತು ಮೊಬಲಗು.	
2	ಮುಳಬಾಗಲ್ ತಾಲ್ಲೂಕಿಗೆ ಗವರ್ಮೆಂಟಿಗೆ —	60—0—0	ಡಿಟೋ.	ಕಂದಾಯದ ಬಾಕಿ.	
		157—1—5			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 249.

ಮೃತಪಟ್ಟ ಮಲ್ಲಿಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬಸಪ್ಪ ಮೈನರ್, ಗಾರ್ಡಿಯ್ಯ ಅಜ್ಜ ಪುಟ್ಟಮ್ಮನು, ಮೃತಪಟ್ಟ ಸದರೀ ಮಲ್ಲಿಂಣನವರಿಗೆ ಮೈನರ್, ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾ|| ಇಬ್ಬುಜಾಲ್ ಗ್ರಾಮ ಸ್ಥಳದ ಸದರೀ ಪುಟ್ಟಮ್ಮನವರು ಸದರೀ ವಾಸಸ್ಥನಾಗಿ ಮೃತಪಟ್ಟಮಲ್ಲಿಂಣನವರ ಜೊಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮನವರ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಿಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 252.

ಮೃತಪಟ್ಟ ಚಂಬಗಾಲ್ ಸುಬ್ಬಾಚಾರ್ರ ಆಸ್ತೀವಿಷಯದಲ್ಲಿ—

ಅರ್ಜೀದಾರ್ರು ಕೇಪಗಿರಿ ಆಚಾರ್ರು, ಮೃತಪಟ್ಟ ಸದರೀ ಸುಬ್ಬಾಚಾರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇಸ್ಥಳದ ಸದರೀ ಕೇಪಗಿರಿ ಆಚಾರ್ರು ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬಾಚಾರ್ರ ಜೊಂದಗಿ ಬಗ್ಯಾಗಿ ಬರತಕ್ಕ 1000 ರೂಪಾಯಿ

ಸಾಲವನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೇಪಗಿರಿ ಆಚಾರ್ರ ಅರ್ಜಿಯನ್ನು 1889ನೇ ಇಸವಿ ನವೆಂಬರ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿಇದೆ.

1889ನೇ ಇಸವಿ ಅರ್ಜೀ ನಂಬರ 253.

ಮೃತಪಟ್ಟ ನಾರಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ನಂಜಪ್ಪನವರು, ಮೃತಪಟ್ಟ ಸದರೀ ನಾರಣಪ್ಪನವರಿಗೆ ಭಾವಮೈದ ಆಗಬೇಕೆಂಬ ಹಕ್ಕುದಾರಿ ಮೇಲೆ ಅರಕೀಕೆರೆ ತಾ|| ತೊಂಬವಾಗಲು ಸ್ಥಳದ ಸದರೀ ನಂಜಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಾರಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 1000 ರೂ. ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಪ್ಪನವರ ಅರ್ಜಿಯನ್ನು 1889ನೇ ಇಸವಿ ನವೆಂಬರ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅಕ್ಟೋಬರ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜೀ ನಂಬರ 269.

ಮೃತಪಟ್ಟ ನಂಜರಾಜೇ ಅರಸಿನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಲುವೇಅರಸಿನವರು, ಮೃತಪಟ್ಟ ಸದರೀ ನಂಜರಾಜೇ ಅರಸಿನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕೃಷ್ಣರಾಜ ಮೊಹಲಾ ಸ್ಥಳದ ಸದರೀ ಚಲುವೇ ಅರಸಿನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಂಜರಾಜೇ ಅರಸಿನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಲುವೇ ಅರಸಿನವರ ಅರ್ಜಿಯನ್ನು 1889ನೇ ಇಸವಿ ಡಿಕ್ಸಂಬರ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜರಾಜೇ ಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ನವೆಂಬರ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಶೇಷಾಚಿರಾವ್,

ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿವಿಜ್ಞ.

ಪ್ರೆಸಿದ್ಧ ಪತ್ರಿಕೆ.

ತಾರೀಖು 12ನೇ ನವೆಂಬರ 1889.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ತಿಳಿಯಪಡಿಸುವದೇನಂದರೆ,—ಹೆಗ್ಗಡದೇವನಕೋಟೆಯಲ್ಲಿ ಹೊಸದಾಗಿ ತಯಾರಾಗತಕ್ಕ ತಾಲ್ಲೂಕು ಕಚ್ಚೇರಿ ಕಾವಮಗಾರಿ ಕಂಟ್ರಾಕ್ಟಿಗಾಗಿ ಮೊಹರಾಗಿ ಬರುವ ದರಖಾಸ್ತುಗಳನ್ನು ಮೈಸೂರು ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಬರುವ ಡಿಕಂಬರ 3ನೇ ತಾರೀಖು ಪರಿಯಂತರ ಹಿಡಿಯಲ್ಪಡುವದು.

ಸುಮಾರು ಅಂದಾಜು ಪರಿಮಾಣವನ್ನು ಈ ಕೆಳಗೆ ನಮೂದಿಸಿ ಯಿದೆ ಈ ಪರಿಮಾಣವು ಗೊತ್ತಾದ್ದಲ್ಲಾ, ಕಾವಮಗಾರಿಯು 1891ನೇ ಇಸವಿ ಸೆಪ್ಟಂಬರ ಅಖೈರಿನಲ್ಲಿ ಪೂರೈಸತಕ್ಕದ್ದು.

2. ಪ್ಲ್ಯಾನ್ಸ್ವರ್ಗ ಅಂದಾಜು ಮತ್ತು ಷರತ್ತು ಇತರ ಸಂಗತಿಗಳನ್ನು ಸಹ ದಿವಿ 11 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ವರಿಗೆ ಮೈಸೂರು ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ ಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡುವದೋ ಅದನ್ನು ತೋರಿಸಿ ಕೆಳಗೆ ಕೊಟ್ಟು ಯಿರುವ ಫಾರಮಿನಂತೆ ಬಂದು ಪಟ್ಟಿ ತಯಾರಿಯಿಂದ ದರಖಾಸ್ತುನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳೂ ಪ್ರೊನೋಟಿ ಮೂಲಕವಾಗಲಿ ವ ನಗದಾಗಲಿ 200 ರೂಪಾಯಿ ಡಿಪಾಜಿಟ್ಟನ್ನು ವಡಗೂಡಿ ಯಿರಬೇಕು. ಮತ್ತು ಹೆಗ್ಗಡದೇವನಕೋಟೆಯಲ್ಲಿ ಹೊಸದಾಗಿ ತಯಾರಾಗುವ ತಾಲ್ಲೂಕು ಕಚ್ಚೇರಿ ಕಾವಮಗಾರಿ ದರಖಾಸ್ತುಯೆಂತ ಲಿಫಾಫೇಮೇಲೆ ಬರಮಾಯಿರಬೇಕು. ಹೀಗೆ ಯಿಲ್ಲದ್ದ ಬರುವ ದರಖಾಸ್ತುಳನ್ನ ತಿರಸ್ಕರಿಸಲ್ಪಡುವದು.